ತಹಸಿಲ್ದಾರ್ ಮತ್ತು ಗ್ರಾಮ ಲೆಕ್ಕಿಗರನ್ನು ಕೂಡಲೇ ಅಮಾನತ್ತುಗೊಳಿಸಿ ಈ ಬಗ್ಗೆ ವಿವರಣೆ ತರಿಸಿಕೊಂಡು ಅವರುಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಭೂ ಹೀನರಿಗೆ ಜಮೀನನ್ನು ಸರಿಯಾದ ರೀತಿಯಲ್ಲಿ ವಿತರಣೆ ಯಾಗುವಂತಹ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಸಂತರಾವ್ ಎಲ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ವಿಚಾರವಲ್ಲಿ ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

Re: Appointment of local persons in New Mangalore port

ಡಾ।। ವಿ.ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೆ ನವ ಮಂಗಳೂರು ಬಂದರು ನಮ್ಮ ರಾಜ್ಯದ ಹೆಮ್ಮೆಯ ಬಂದರು. ಅಲ್ಲಿನ ಜನರು ಆ ಬಂದರು ನಿರ್ಮಾಣವಾಗಲಿಕ್ಕೆ ತಮ್ಮ ಜಮೀನು ಮನೆ ಮಠ, ತೋಟ ಮತ್ತು ಕಟ್ಟಡಗಳ ತ್ಯಾಗ ಮಾಡಿ ನಿರ್ಮಾಣಕ್ಕಾಗಿ ಬಹಳ ಶ್ರಮಿಸಿದ್ದಾರೆ. ಇಲ್ಲಿ ಉದ್ಯೋಗ ಕೊಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಡಿಸ್‌ಪ್ಲೇಸ್ಡ್ ಪರ್ಸನ್ಸ್ ಮತ್ತು ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕೆಂದು ಗೃಹ ಇಲಾಖೆಯಿಂದ ಆದೇಶವನ್ನು ಹೊರಡಿಸಿದ್ದಾರೆ. ಈ ಆದೇಶದ ಪ್ರಕಾರ 'ಡೆಕ್ ಹ್ಯಾಂಡ್ಸ್' ೬೦ ಜನ ಅಂದರೆ ಹಡಗಿಗೆ ಸಾಮಾನು ಹೇರುವಂತಹವರ ಹುದ್ದೆಗಾಗಿ ದಿನಾಂಕ ೨೧-೧೧-೮೩ರಂದು ಪ್ರಕಟಣೆ ಹೊರಡಿಸಿದ್ದಾರೆ. ಕೇಂದ್ರ ಸರ್ಕಾರದವರ ಆದೇಶದ ಪ್ರಕಾರ ಸ್ಥಳೀಯ ನಿರ್ವಸತಿಕರಿಗೆ, ಹರಿಜನ ಗಿರಿಜನರಿಗೆ, ಮೀನುಗಾರ ನಿರ್ವಸತಿಕರಿಗೆ ಉದ್ಯೋಗಗಳನ್ನು ಕೊಡಬೇಕಾಗಿತ್ತು. ಈ ಹುದ್ದೆಗಾಗಿ ದಿನಾಂಕ ೫-೨-೮೪ರಂದು ಸಂದರ್ಶನ ಕೂಡ ಆಯಿತು. ಸುಮಾರು ೬೦ ಹುದ್ದೆಗಳಿಗೆ ಸುಮಾರು ೫ ಸಾವಿರ ಅರ್ಜಿಗಳು ಬಂದಿದ್ದವು. ನೇಮಕ ಮಾಡಿದ ಪಟ್ಟಿಯನ್ನು ನಂತರ ನೋಡಿದಾಗ ೬೦ ಹುದ್ದೆಗಳಲ್ಲಿ ಕೇವಲ ೨೩ ಹುದ್ದೆಗಳು ಮಾತ್ರ ನಿರ್ವಸತಿಕರಿಗೆ ಬದಗಿಸಲಾಗಿತ್ತು. ನನ್ನ ಪ್ರಶ್ನೆ ಏನೆಂದರೆ, ಆ ಬಂದರು ಕೇಂದ್ರ ಸರ್ಕಾರಕ್ಕೆ ಒಳಪಟ್ಟಿರಬಹುದು. ಉದ್ಯೋಗವನ್ನು ಕೊಡುವಾಗ ಸ್ಥಳೀಯರಿಗೆ ಮತ್ತು ನಿರ್ವಸತಿಕರಿಗೆ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಆದ್ಯತೆ ಕೊಡಬೇಕು. ಮೊನ್ನೆ ನಡೆದ ನೇಮಕಾತಿಗಳಲ್ಲಿ ಬೇರೆ ಬೇರೆ ಕಡೆಗಳಿಂದ ಬಂದವರಿಗೆ ಉದ್ಯೋಗವನ್ನು ಒದಗಿಸಲಾಗಿದೆ. ಈ ಬಂದರಿನಲ್ಲಿ ಮೀನುಗಾರರಿಗೆ ಉದ್ಯೋಗ ಕೊಟ್ಟಿಲ್ಲ. ಮೀನುಗಾರರ ಹಿತಾಸಕ್ತಿ ಕಾಪಾಡಲಿಲ್ಲ. ನವ ಮಂಗಳೂರು ಹೊರಗಡೆ ವಾಸಿಸುವ ಶೇಕಡಾ ೭೦ರಷ್ಟು ಹೊರಗಿನವರು ಉದ್ಯೋಗಗಳನ್ನು ಕಬಳಿಸಿಕೊಂಡು ಹೋಗಿದ್ದಾರೆ. ೧೯೭೦ನೇ ಇಸವಿಯಿಂದ ಇಲ್ಲಿ ಅನ್ಯಾಯವಾಗಿದೆ. ಇದನ್ನು ಸರ್ಕಾರ ಗಭೀರವಾಗಿ ಪರಿಗಣಿಸಿಲ್ಲ. ಈಗ ಆಗಿರುವಂತಹ ನೇಮಕ ಪಟ್ಟಿಯನ್ನ ರದ್ದು ಮಾಡಬೇಕು. ನನಗೆ ತಿಳಿದ ಅಂಶಗಳ ಪ್ರಕಾರ ೬೦ ಜನರನ್ನು ನೇಮಕ ಮಾಡಿದಂತಹ ಪಟ್ಟಿಯಲ್ಲಿ ೩೭ ಜನ ಹೊರಗಿನವರೇ ಆಗಿದ್ದಾರೆ. ಆದುದರಿಂದ ಸರ್ಕಾರ ಆ ಪಟ್ಟಿಯನ್ನು ರದ್ದು ಮಾಡಬೇಕು ಮತ್ತು ನಿರ್ವಸತಿಕರಿಗೆ ಉದ್ಯೋಗಗಳನ್ನು ಕೊಡಬೇಕೆಂದು ಪ್ರಭಲವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಡಾ।।ಆಚಾರ್ಯರವರು ಹೇಳಿದಂತಹ ವಿಚಾರದಲ್ಲಿ ನನ್ನ ವ್ಯಾಪ್ತಿಯಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುತ್ತೇನೆ.

ಡಾ।।ವಿ.ಎಸ್. ಆಚಾರ್ಯ.—ಈಗ ಇದರಲ್ಲಿ ಬಹಳ ಅನ್ಯಾಯವಾಗಿದೆ ಶೇಕಡಾ ೭೦ರಷ್ಟು ಉದ್ಯೋಗಗಳನ್ನು ಹೊರಗಿನವರೇ ಕಬಳಿಸಿಕೊಂಡಿದ್ದಾರೆ. ನವ ಬಂದರಿನ ಒಳಗೆ ಮತ್ತು ಹೊರಗೆ ೭೦ರಷ್ಟು ಜನ ಬೇರೆ ಬೇರೆ ಕಡೆಗಳಿಂದ ಬಂದವರಾಗಿದ್ದಾರೆ. ಇದರ ಬಗ್ಗೆ ಕೂಡಲೇ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂತಹ ವಿಷಯವನ್ನು ನಾನು ತಿಳಿದುಕೊಂಡು ನನಗೆ ಇರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಏನು ಪರಿಹಾರ ಒದಗಿಸಬೇಕು ಅದನ್ನು ಒದಗಿಸಲು ಪ್ರಯತ್ನ ಮಾಡುತ್ತೇನೆ.

Re: Suicide by two girls belongs to Nirmala convent Mysore

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ 'ನಿರ್ಮಲ' ಕಾನ್ವೆಂಟ್‌ನಲ್ಲಿ ಒಂದು ಅಹಿತರ ಘಟನೆ ನಡೆದಿದೆ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕುಮಾರಿ ಆಶಾ